
# ರಾಜ್ಯ, ಕಾಲ ಮತ್ತು ವಾಸ್ತು



ಹಳೇಮನಿ

**ವಾಸ್ತು!**

ವಸ್ತು ಚಿಕ್ಕದಾದರೂ ವಾಸ್ತು ದೊಡ್ಡದು!

ಎಲ್ಲಕ್ಕೂ ದೇವರೇ ದಿಕ್ಕು, ನಮ್ಮನ್ನು ಕಾಯುವವನೇ ಅವನು ಎನ್ನುವ ಜನರೂ ತಲೆಯ ಮೇಲೆ ಹೇರಿಕೊಂಡಿರುವ ಮೌಢ್ಯಗಳ ಪೈಕಿ ವಾಸ್ತುವೂ ಒಂದು.

ಹಾಗೆ ನೋಡಿದರೆ ವಾಸ್ತು ಸಂಪೂರ್ಣವಾಗಿ ಅಲ್ಲಗಳೆಯುವಂತಹ ಶಾಸ್ತ್ರವೇನಲ್ಲ; ಕಾಲಕ್ಕೆ, ಸುತ್ತಲಿನ ಭೂಲಕ್ಷಣಗಳಿಗೆ ತಕ್ಕಂತೆ ವಾಸ್ತುವೂ ಬದಲಾಗುತ್ತದೆ, ಅದು ಅಡಿಗೆ ಮಾಡುವುದಕ್ಕೆ ಬರೆದಿಟ್ಟಂತಹ ರೆಸಿಪಿಯನ್ನು ಅನುಸರಿಸಿ ಒಂದೇ ಲಕ್ಷಣ, ಪ್ರಮಾಣ, ಪರಿಣಾಮಗಳನ್ನು ಎಲ್ಲೆಡೆಯೂ ಅಳವಡಿಸುವಂತೆ ಅಳವಡಿಸುವಂತಹದ್ದಲ್ಲ; ಪಾಕಶಾಸ್ತ್ರವೇ ಬೇರೆ, ವಾಸ್ತುಶಾಸ್ತ್ರವೇ ಬೇರೆ ಎಂಬ ಅರಿವು ನಮ್ಮ ವಿದ್ಯಾವಂತ, ತಿಳುವಳಿಕಸ್ಥ ಮಂದಿಗೂ ಮೂಡದಿರುವುದು ಖೇದಕರ.

ವಾಸ್ತು ಆಂಧ್ರದ ಮೇಲ್ಮೈಗೆ ಸಂಬಂಧಿಸಿದ್ದು; ಅಲ್ಲಿನ ಪ್ರಮುಖ ನದಿಗಳು ಈಶಾನ್ಯದತ್ತ ಹರಿಯುವುದರಿಂದ ಗದ್ದೆಗಳಲ್ಲಿ, ಜಮೀನುಗಳಲ್ಲಿ ನೀರು ನಿಲ್ಲದೆ ನದಿಯತ್ತ ಹರಿಯಲಿ ಎಂಬ ಸಾಮಾನ್ಯ ಪ್ರಜ್ಞೆಯನ್ನು ಆಧರಿಸಿ ಮನೆಯ ಮುಂದಿನ ನೀರು ಪೂರ್ವ ಅಥವಾ ಉತ್ತರದತ್ತ ಹರಿಯಲಿ ಎಂದರು. ಗದ್ದೆಗೆ ಸಂಬಂಧಿಸಿದ ಶಾಸ್ತ್ರವನ್ನು ನಮ್ಮ ಮಹಾನ್ ಶಾಸ್ತ್ರಜ್ಞರು ಮನೆಗಳಿಗೂ ಅನ್ವಯಿಸಿದರು!

ನೀರು ಈಶಾನ್ಯದತ್ತ ಹರಿಯುವುದು ಆಂಧ್ರದ ಪ್ರಕಾರ ಸರಿ. ಹಾಗೆ ಹರಿಯುವ ನೀರು ಮನೆಯೊಳಗೆ ಬಾರದಿರಲಿ ಎಂದು ಪಶ್ಚಿಮ ಮತ್ತು ದಕ್ಷಿಣಗಳನ್ನು ರಸ್ತೆಗಿಂತಲೂ ಎತ್ತರದಲ್ಲಿ ಇರಿಸುವುದು ಸಹ ಸರಿ. ಇದೇ ಅಲ್ಲಿಯ ವಾಸ್ತುವಿನ ಹೇಳಿಕೆ ಸಹ. ಉತ್ತರ ಮತ್ತು ಪೂರ್ವಕ್ಕೆ ತಗ್ಗಿರಲಿ, ಪಶ್ಚಿಮ ಮತ್ತು ದಕ್ಷಿಣ ಎತ್ತರವಿರಲಿ ಎನ್ನುತ್ತಾ, ದಕ್ಷಿಣ–ಪಶ್ಚಿಮದ ದಿಕ್ಕಿನಲ್ಲಿ ಎತ್ತರವಿರುತ್ತದಾದ್ದರಿಂದ ಅಲ್ಲಿ ಮನೆಯ ಸಿರಿ, ಸಂಪತ್ತು, ದವಸ, ಧಾನ್ಯಗಳನ್ನು ಇಟ್ಟರೆ ನೀರು ನುಗ್ಗಿ ಹಾಳಾಗದೆಂಬ ಕಾರಣದಿಂದ ವಾಯವ್ಯದಲ್ಲಿ ಭಾರ ಇರಬೇಕು ಎಂದು ಹೇಳಿರುವುದು ಅಲ್ಲಿನ ಗದ್ದೆಬಯಲಿನ ಮನೆಗಳಿಗೆ ಅಗತ್ಯವಾದ ನಿಯಮ. ಆದರೆ ಅಲ್ಲಿ ಗದ್ದೆಗೆ ಅಳವಡಿಸಿದ ನಿಯಮ ನಗರಗಳಲ್ಲಿ ಮನೆಗೆ ಶಾಸ್ತ್ರವಾಗಿ ಮಾರ್ಪಡಿಸಿ ಅಳವಡಿಸಬೇಕೆಂದೇನೂ ಇಲ್ಲ. ತಗ್ಗಿನಲ್ಲಿ ನೀರು ಸೇರದಂತೆ ತಡೆಗೋಡೆ ನಿರ್ಮಿಸಿದಲ್ಲಿ ಯಾವುದೇ ವಿಧವಾದ ಹಾನಿ ಮನೆಗೂ, ಮನೆಯವರಿಗೂ ಉಂಟಾಗುವುದಿಲ್ಲ. ನಮ್ಮಲ್ಲಿ ಬಿಡಿಎ ನೀಡಿದ ಸೈಟುಗಳು ಹಲವಾರು ಬಾರಿ ರಸ್ತೆಗಿಂತಲೂ ಹತ್ತಾರು ಅಡಿ ಆಳದಲ್ಲಿರುತ್ತವೆ. ಅದನ್ನು ಅಚ್ಚುಕಟ್ಟಾಗಿ ಸೆಲ್ಲಾರ್ ಕಟ್ಟುವುದಕ್ಕೆ ಅನುವು ಮಾಡಿಕೊಂಡು, ಬಡಾವಣೆಯ ಮೇಲ್ಮೈಗೆ ಹೊಂದಿದಂತೆ ಮನೆ ಕಟ್ಟುವುದು ಜಾಣತನ.

ರಾಜ್ಯದಲ್ಲಿ ವಾಸ್ತು ಹೇಗಿರಬೇಕು: ಮೊದಲಿಗೆ ಕೋಷ್ಟಕದಂತಹ ವಾಸ್ತು ಪುಸ್ತಕವನ್ನು ಹೊರಗೆ ಹಾಕುವುದು ಸೂಕ್ತ. ನಂತರ ನಮ್ಮ ಬಡಾವಣೆಯ ಮೇಲ್ಮೈ ಲಕ್ಷಣವನ್ನು ಗಮನಿಸುವುದು ಅತ್ಯವಶ್ಯ. ನಿವೇಶನದ ಮುಂದಿನ ರಸ್ತೆ ಉತ್ತರಕ್ಕೆ ಅಥವಾ ಪೂರ್ವಕ್ಕೆ ಇಳಿಜಾರಿದ್ದಲ್ಲಿ ವಾಸ್ತು ಪುಸ್ತಕ ಹೇಳಿದ ರೀತಿಯನ್ನೇ ಅನುಸರಿಸಬಹುದು. ರಸ್ತೆ ಪಶ್ಚಿಮಕ್ಕೆ ಇಳಿಜಾರಿದ್ದರೆ ಮನೆಯ ಎಲ್ಲಾ ನೀರೂ ಪಶ್ಚಿಮದತ್ತ ಹರಿಯುವಂತೆ ಮಾಡಿ, ಪಶ್ಚಿಮದಲ್ಲೇ ಸಂಪ್ ಹೊಂದುವುದು ಉಚಿತ. ಉತ್ತರ ಮತ್ತು ಪೂರ್ವಗಳಲ್ಲಿ ಮೂರರಿಂದ ನಾಲ್ಕು ಅಡಿಗಳಷ್ಟಾದರೂ ಜಾಗ ಬಿಟ್ಟು, ಮಿಕ್ಕ ಕಡೆ ಮನಬಂದಷ್ಟು ಅಥವಾ ಅನುಕೂಲಕರವಾದಷ್ಟು ಜಾಗ ಬಿಟ್ಟು ಮನೆ ಕಟ್ಟಿದರೆ ಸಾಕು. ಆದರೆ ತೆರೆದ ಬಾವಿ ತೋಡಬೇಕಾದಲ್ಲಿ ಅದು ಈಶಾನ್ಯದಲ್ಲೇ ಇರಬೇಕಾಗುತ್ತದೆ (ಕಾರಣಗಳನ್ನು ಇದೇ ಅಂಕಣದಲ್ಲಿ ಈ ಹಿಂದೆ ನೀಡಲಾಗಿದೆ). ಪಶ್ಚಿಮಕ್ಕೆ ರಸ್ತೆ ಇದ್ದವರು ಉತ್ತರಕ್ಕೆ ಬಾಗಿಲು ಇಟ್ಟುಕೊಂಡಲ್ಲಿ ಹಾಗೂ ಮುಂದೆ ಒಂದಷ್ಟು ಪೋರ್ಟಿಕೊ ಹರಡಿಕೊಂಡಿದ್ದಲ್ಲಿ, ಮುಂಬಾಗಿಲು ಹೆಚ್ಚು ದಿನ ಬಾಳಿಕೆ ಬರುತ್ತದೆ. ಇಲ್ಲವಾದರೆ ದಿನವೂ ಬೀಳುವ ಸೂರ್ಯನ ಪಶ್ಚಿಮ ಕಿರಣಗಳ ಪ್ರಭಾವದಿಂದ ಅದನ್ನು ಆಗಾಗ್ಗೆ ಪೇಂಟ್ ಅಥವಾ ಪಾಲಿಷ್ ಮಾಡಿಸುತ್ತಿರಬೇಕಾಗುತ್ತದೆ. ಪೂರ್ವಕ್ಕೆ ಇರುವ ಬಾಗಿಲಿಗೂ ಮುಂಚಾಚಿದ ಪೋರ್ಟಿಕೊ ಇಲ್ಲದಿದ್ದಲ್ಲಿ ಇದೇ ಸ್ಥಿತಿ ಅನ್ವಯವಾಗುತ್ತದೆ.

ದಕ್ಷಿಣದತ್ತ ರಸ್ತೆ ಇಳಿಜಾರಿದ್ದಲ್ಲಿ ನೀರು ದಕ್ಷಿಣಕ್ಕೆ ಹರಿದು ಸಾಗಲೇಬೇಕು. ಇಲ್ಲಿಯೂ ಸಂಪ್ ಮನೆಯ ಮುಂಭಾಗದಲ್ಲೇ ಇದ್ದರೆ ಪೋರ್ಟಿಕೊ, ಪಾರ್ಕಿಂಗ್ ಜಾಗದಲ್ಲಿ ಅದೂ ಇರುವಂತಾಗಿ, ಶುಚಿ ಮಾಡಲು ಯಾರನ್ನು ಕರೆದರೂ ಮನೆಯೊಳಗೆ ಬಿಟ್ಟುಕೊಳ್ಳುವ ಪ್ರಸಂಗ ತಪ್ಪುತ್ತದೆ. ದಕ್ಷಿಣದ ನಿವೇಶನದಲ್ಲೂ ಪೂರ್ವದ ಬಾಗಿಲಿಗೆ ಮೇಲ್ಕಂಡಂತಹ ತೊಂದರೆ ಒದಗುತ್ತದೆ. ಆದ್ದರಿಂದ ಪೂರ್ವಕ್ಕೆ ಅಥವಾ ಪಶ್ಚಿಮಕ್ಕೆ ಇರುವ ಬಾಗಿಲ ಮುಂದೆ ಮುಂಚಾಚು ಇರಲೇಬೇಕು. ದಕ್ಷಿಣದ ನಿವೇಶನದಲ್ಲೂ ಈಶಾನ್ಯದಲ್ಲಿ ಕೊಂಚ ಖಾಲಿ ಜಾಗ ಇದ್ದರೆ ಉತ್ತಮ – ಸೂರ್ಯನ ಬೆಳಕು ಬಹು ಕಾಲ ಈ ದಿಕ್ಕಿನಲ್ಲಿ ಬೀಳುತ್ತದೆ ಮತ್ತು ಈ ದಿಕ್ಕಿನಲ್ಲಿ ಗಾಢವಾದ ನೆರಳು ಮೂಡುವುದಿಲ್ಲವಾದ್ದರಿಂದ ಮನೆಯಲ್ಲಿ ಬೆಳಕು ಪಸರಿಸಿ, ಆರೋಗ್ಯಕರ ವಾತಾವರಣ ಇರುವುದು ಎನ್ನುವುದೇ ಇದರ ಮೂಲ ಉದ್ದೇಶ.

ಮನೆಯ ಮುಂಬಾಗಿಲು: ಮನೆಯ ಮುಂಬಾಗಿಲನ್ನು ನಿವೇಶನದ ಮಧ್ಯಭಾಗಕ್ಕೆ ಸರಿಸುಮಾರಾಗಿ ಹೊಂದುವಂತೆ ಇರಿಸಿ, ರಸ್ತೆ ಕಾಣುವ ರೀತಿಯಲ್ಲೇ ಇರಿಸುವುದು ಇಂದಿನ ಭಯೋತ್ಪಾದನಾ ದಿನಗಳಲ್ಲಿ ಕ್ಷೇಮಕರ. ವಾಸ್ತು ಹೇಳಿತು ಎನ್ನುತ್ತಾ ರಸ್ತೆಗೆ ಮರೆಯಾಗಿರುವ ರೀತಿಯಲ್ಲಿ ಮುಂಬಾಗಿಲನ್ನು ಇಡುವುದು ಕ್ಷೇಮಕರವಲ್ಲ.

■ ವೈ–ಚಾರಿ